ನೆಲೆ, ಮುಖ್ಯ ವ್ಯಾಪಾರಿ ಬಂದರು ಸ್ಥಳವನ್ನು ಹೊಂದಿರುವಂತಹ ಪ್ರಮುಖ ಪ್ರದೇಶ ಹಾಗೂ ಅತ್ಯಂತ ಆಯಕಟ್ಟಿನ ಸ್ಥಳವಾಗಿದೆ. ಯಾವುದೇ ರೀತಿಯ ಅನುಮತಿ ಪತ್ರ ಇಲ್ಲದೇ, ಚೀನಾ ಗೂಢಾಚಾರರು ಟಿಬೇಟಿಯನ್ ನಿರಾಶ್ರಿತರ ಹೆಸರಿನಲ್ಲಿ, ಅಲ್ಲಿ ಬಂದು ನೆಲೆ ನಿಂತಿದ್ದಾರೆ. ತಮ್ಮ ದೇಶಕ್ಕೆ ಬೇಹುಗಾರಿಕೆ ವರದಿಯನ್ನು ಕಳುಹಿಸುತ್ತಿದ್ದಾರೆ ಎನ್ನುವ ವರದಿ ಅತ್ಯಂತ ಆಘಾತಕಾರಿ ಸಂಗತಿ. ಇದನ್ನು ನಿಯಂತ್ರಣ ಮಾಡುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕು, ಬಿಗಿ ನಿಲುವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಈಗಾಗಲೇ ನಮಗೆ ಗೊತ್ತಿರುವ ಹಾಗೆ, ಪಾಕಿಸ್ಥಾನಿ ಭಯೋತ್ಪಾದನಾ ಸಂಘಟನೆಗಳು ಏನಿವೆ ಜೈಷ್-ಎ-ಮೊಹಮದ್ ಮತ್ತು ಲಷ್ಕರ್-ಎ-ತೊಯ್ಬಾ ಈ ರೀತಿಯ ಸಂಘಟನೆಗಳಿಗೆ, ಚೀನಾದ ಗೂಢಾಚಾರರು, ಭಾರತದಲ್ಲಿ ಆಂತರಿಕ ಸಂಘರ್ಷವನ್ನು ಹುಟ್ಟು ಹಾಕುವುದಕ್ಕೆ ಇಲ್ಲಿ ಪ್ರಚೋದನೆ ಕೊಡುತ್ತಿರುವ ಸಂಗತಿ ಜಗಜ್ಜಾಹೀರು ಆಗಿರುವಂತಹ ಸಂಗತಿ. ನೇಪಾಳದಲ್ಲಿ ಆಂತರಿಕವಾಗಿ ಗಲಭೆಯನ್ನು ಹುಟ್ಟುಹಾಕಿ, ಚೀನಾ ಬೆಂಬಲಿತ ಸರ್ಕಾರ ಅಲ್ಲಿ ಅಸ್ತಿತ್ವಕ್ಕೆ ಬರುವುದಕ್ಕೆ ಹೇಗೆ ಕಾರಣವಾಯಿತು ಎನ್ನುವುದನ್ನು ನಾವು ಕಂಡಿದ್ದೇವೆ. ನಕ್ಸಲ್ ಚಳವಳಿಗೆ ಇಂಬು ಕೊಡುತ್ತಿರುವುದನ್ನು ನಾವು ಕಂಡಿದ್ದೇವೆ. ಚೀನಾ ದೇಶದಿಂದ ಪ್ರೇರಣೆ ಪಡೆದಿರುವಂಥ ನಕ್ಸಲ್ ಯುವಕರಿಗೆ ಪರೋಕ್ಷವಾಗಿ ಚೀನಾ ದೇಶ ಬೆಂಬಲ ಕೊಡುತ್ತಿರುವುದನ್ನು ನಾವು ಕಂಡಿದ್ದೇವೆ. ಹೀಗೆ ನಾಳೆ ಅಪಾಯ ಒದಗುವ ಸ್ಥಿತಿ ಇರುವುದರಿಂದ, ಈ ಪತ್ರಿಕೆಯಲ್ಲಿ ಬಂದಿರುವ ವರದಿ ನಿಜವೇ? ನಿಜವೇ ಆಗಿದ್ದರೆ, ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳುವುದಕ್ಕೆ ಬಯಸುತ್ತೇನೆ.

2) ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿ ಮೆಕ್ಕೆಜೋಳ ಖರೀದಿಯಲ್ಲಿ ಉದ್ಭವಿಸಿರುವ ಸಮಸ್ಯೆ ಬಗ್ಗೆ.

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಈ ವಿಷಯದ ಬಗ್ಗೆ ಮಾಹಿತಿ ಇರಬಹುದು ಎಂದು ನಾನು ಭಾವಿಸಿದ್ದೇನೆ. ಇದು ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ವಿಚಾರ. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಈ ಮೆಕ್ಕೆಜೋಳ ಖರೀದಿ ಬಗ್ಗೆ ಸಾಕಷ್ಟು ಗದ್ದಲ ಅಲ್ಲಿ ಉಂಟಾಗಿದೆ. ಕಾರಣವೇನೆಂದರೆ, ನಿಮಗೆ ಗೊತ್ತಿರುವ ಹಾಗೆ, ಸುಮಾರು 62,000 ಹೆಕ್ಟೇರ್‌ನಲ್ಲಿ ನಿಮ್ಮ ಸರ್ಕಾರ ನಿಗದಿಪಡಿಸಿರುವಂಥ ದರ ಏನಿದೆ, ಆ ದರದಲ್ಲಿ

ತೆಗೆದುಕೊಳ್ಳಬೇಕಾದರೆ, ಅಲ್ಲಿ ಖರೀದಿ ಮಾಡುವ ಕೇಂದ್ರಗಳಲ್ಲಿ ಹಣವಿಲ್ಲ. ಹಣವಿಲ್ಲದ ಕಾರಣ ಈ ಹಿಂದೆ ಏನು ಖರೀದಿ ಮಾಡಿದ್ದಾರೆ, ಸುಮಾರು 30 ರಿಂದ 35 ಲಕ್ಷ ಕ್ವಿಂಟಾಲ್ ಉತ್ಪತ್ತಿಯಾಗುವಂಥಾದ್ದು, ಅದೆಲ್ಲವನ್ನೂ ಯಾರಿಗೂ at a time ಖರೀದಿ ಮಾಡುವುದಕ್ಕಾಗುವುದಿಲ್ಲ. ಆದರೂ, ಬೆಲೆ ನಿಯಂತ್ರಣ ಮಾಡುವ ದೃಷ್ಟಿಯಿಂದ ಇವತ್ತು ಏನು ಖರೀದಿ ಮಾಡಬೇಕಾಗಿತ್ತು, ವಿಶೇಷವಾಗಿ ಶಿರಾಳಕೊಪ್ಪ, ಶಿಕಾರಿಪುರ ಹಾಗೂ ಶಿವಮೊಗ್ಗ ಈ ಎಲ್ಲಾ ಕೇಂದ್ರಗಳಲ್ಲಿ ಇವತ್ತು ಸುಮಾರು 20-25 ಸಾವಿರ ಕ್ವಿಂಟಾಲ್‌ಗಳನ್ನು ಖರೀದಿ ಮಾಡಿಕೊಂಡಿದ್ದಾರೆ. ಆದರೆ, ಅವರಿಗೆ ಕೊಡುವುದಕ್ಕೆ ಹಣವಿಲ್ಲ. ಅದಕ್ಕಾಗಿ ನಿಮ್ಮ ಆವರ್ತ ನಿಧಿಯನ್ನು, ಇವತ್ತು ಅಲ್ಲಿ ಬೇಡಿಕೆ ಇರುವುದರಿಂದ 200 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕು. ಅಷ್ಟು 200 ಕೋಟಿ ರೂಪಾಯಿಗಳನ್ನು at a time ಕೊಡುವುದಕ್ಕೆ ಆಗುವುದಿಲ್ಲವೆಂದರೂ ಸಹ ಕನಿಷ್ಠ ಅಲ್ಲಿನ ವಾತಾವರಣವನ್ನು ತಿಳಿಗೊಳಿಸುವುದಕ್ಕೋಸ್ಕರ ಮತ್ತು ಈ ಒಂದು rate ಕಾಯಂ ಆಗಿ ರೈತರಿಗೆ ಸಿಗಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ತಕ್ಷಣ ಹಣ ಬಿಡುಗಡೆ ಮಾಡುವ ಅವಶ್ಯಕತೆ ಇದೆ. ತಮಗೆ ಗೊತ್ತಿರುವ ಹಾಗೆ, ಹಿಂದೆ ಎಷ್ಟೋ ಬಾರಿ ತಾವೇ ಪ್ರತಿಭಟನೆ ಮಾಡಿದ್ದೀರಿ. ಎಲ್ಲೆಲ್ಲಿ market yard ಇವೆ, ಸ್ವತ: ಮಾನ್ಯ ಮುಖ್ಯಮಂತ್ರಿಗಳೇ ನೋಡಿದ್ದೀರಿ. ಅಲ್ಲಿ ಹೋಗಿ ಈ ಕಡೆಯಿಂದ ಆ ಕಡೆ ಚೀಲ, ಆ ಕಡೆಯಿಂದ ಈ ಕಡೆ ಚೀಲ ಹೀಗೆ ರೈತರನ್ನು ಎಬ್ಬಿಸಿ ಕುಳ್ಳರಿಸುವ ಅನೇಕ ಘಟನೆಗಳನ್ನು ನೆನಪಿಸಿಕೊಂಡು ನೋಡಿದರೆ, ಈ ಹಿಂದೆ ರೈತ ಪ್ರತಿನಿಧಿಯಾಗಿ ಹೋರಾಟ ಮಾಡಿದ್ದು ಇದೆ. ಈಗ ಬಹುಶ: ಅದು ನೆನಪಿಗೆ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ತಕ್ಷಣ ಈ ವ್ಯವಸ್ಥೆಯನ್ನು ಮಾಡಬೇಕು ಮತ್ತು ಅಲ್ಲಿರತಕ್ಕಂಥ ರೈತರ ಸಮಸ್ಯೆಯನ್ನು ಬಗೆಹರಿಸಬೇಕು. ಇಲ್ಲದಿದ್ದರೆ, ಅನಾವಶ್ಯಕವಾಗಿ ಎಲ್ಲಾ ಪಕ್ಷದವರು ಒಂದು ರೂಪದಲ್ಲಿ ಚಳವಳಿ ಪ್ರಾರಂಭ ಮಾಡಿ ದಿಕ್ಕು ತಪ್ಪಿ ಹೋಗುವಂಥ ಸಾಧ್ಯತೆಯಾಗುತ್ತದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದು, ಇದರ ಬಗ್ಗೆ ತಕ್ಷಣ ಕ್ರಮವನ್ನು ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ವಿರೋಧ ಪಕ್ಷದ ಉಪ ನಾಯಕರು) :- ವಿರೋಧ ಪಕ್ಷದ ನಾಯಕರು ಹೇಳಿದ್ದರ ಜೊತೆಗೆ ಒಂದು ಪ್ರಶ್ನೆ ಏನೆಂದರೆ, ಮೆಕ್ಕೆ ಜೋಳಕ್ಕೆ 840 ರೂಪಾಯಿಗಳ minimum support price ಇರತಕ್ಕಂಥಾದ್ದು. ಆದರೆ, market ನಲ್ಲಿ 700-750 ರೂಪಾಯಿಗಳ rate

ಇದೆ. ಮಧ್ಯವರ್ತಿಗಳು ರೈತರಿಂದ ನೇರವಾಗಿ ಏನು 50 ರೂಪಾಯಿ, 100 ರೂಪಾಯಿಗಳ ವ್ಯತ್ಯಾಸವಿದೆ, ಅದನ್ನು ನಮಗೆ ಕೊಟ್ಟು ಬಿಡಿ ಎಂದು, ಅವರೇ ತೆಗೆದುಕೊಂಡು, ಅವರೇ ಹೋಗಿ market intervention ಮೂಲಕ ತೆಗೆದುಕೊಂಡು ಹೋಗಿ, APMC marketನಲ್ಲಿ ಅವರೇ ಕೊಟ್ಟು, ಅವರೇ ದುಡ್ಡು ಮಾಡುತ್ತಿದ್ದಾರೆ. ಇದು ನಿರಂತರವಾಗಿ ಶಿರಾಳಕೊಪ್ಪ ಮತ್ತು ಶಿಕಾರಿಪುರದಲ್ಲಿ ನಡೆಯುತ್ತಿದೆ. ಎರಡು ಭಾಗದಲ್ಲೂ ಕೂಡ ಆಗುತ್ತಿದೆ. ಆ ಕಾರಣಕ್ಕೋಸ್ಕರ ದಯಮಾಡಿ, ಇದು ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರ, ಮಾನ್ಯ ಮುಖ್ಯಮಂತ್ರಿಗಳಿಗೆ ಸಹಾಯ ಮಾಡುವುದಕ್ಕೆ ಹೇಳುತ್ತಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಜಯಚಂದ್ರರವರು ಏಕೆ ಹೇಳುತ್ತಿದ್ದಾರೆಂದರೆ, ಇಷ್ಟೊಂದು detail ಏಕೆ ತಂದಿದ್ದಾರೆಂದರೆ, ಇದು ಅವರ ಅತ್ತೆ ಮಾವನ ಊರು. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಭಾಗಗಳಲ್ಲಿ ಎಷ್ಟು ಕಾಳಜಿಯಿದೆಯೋ ಅಷ್ಟೇ ಕಾಳಜಿ ಮಾನ್ಯ ಜಯಚಂದ್ರರವರಿಗೂ ಇದೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಯಾವ ಉದ್ದೇಶಕ್ಕೋಸ್ಕರ minimum support price operation ಇದೆಯೋ ಅದು ದಲ್ಲಾಳಿಗಳ ಪ್ರವೇಶದಿಂದಾಗಿ ಇವತ್ತು ವಿಫಲವಾಗುತ್ತಿದೆ. ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ, ಮುಖ್ಯಮಂತ್ರಿಗಳು ಆವರ್ತ ನಿಧಿಗೋಸ್ಕರ ಸುಮಾರು 500 ಕೋಟಿ ರೂಪಾಯಿಗಳನ್ನಿಟ್ಟಿದ್ದೇವೆಂದು ಹೇಳಿದರು. ಆದರೆ, ಮೆಕ್ಕೆಜೋಳ ಹಾಕಿ ಒಂದೂವರೆ ತಿಂಗಳಾದರೂ ಇನ್ನು ಹಣವನ್ನು ಕೊಟ್ಟಿಲ್ಲವೆಂದರೆ 500 ಕೋಟಿ ರೂಪಾಯಿ ಇಟ್ಟಿದ್ದು ಎಲ್ಲಿ ಹೋಯಿತು? ದಯಮಾಡಿ ಇದರ ಬಗ್ಗೆ ತಾವು serious ಆಗಿ ಯೋಚನೆ ಮಾಡಬೇಕು. ಹಳೆಯ ಹಣವನ್ನು ಇನ್ನೂ ಕೊಟ್ಟಿಲ್ಲ. ಹೊಸದಾಗಿ ತೆಗೆದುಕೊಂಡು ಲಾರಿಗಳು 2-3 ಕಿ.ಮೀ ಉದ್ದ ಕ್ಯೂ ನಿಂತಿವೆ. ಇವತ್ತು APMC ಅವರು unload ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಅಲ್ಲಿ stock ಆಗಿರುವ materialsನ್ನು ಬೇರೆ ಕಡೆ shift ಮಾಡುತ್ತಿಲ್ಲ. ಈ ತರಹ practical problemಗಳಿವೆ. ಆದುದರಿಂದ immediate ಆಗಿ ಯಾರಾದರೂ officers ಅಲ್ಲಿ ಹೋಗಿ settle ಮಾಡಬೇಕು. Immediate ಆಗಿ payment ಕೊಡತಕ್ಕಂತಹ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು.

ಅಧ್ಯಕ್ಷರು :- ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೋ ಅಥವಾ APMC ಸಚಿವರು ಉತ್ತರವನ್ನು ಕೊಡುತ್ತಾರೋ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :- ನಮ್ಮ ಪ್ರತಿಪಕ್ಷದ ನಾಯಕರು ಹಾಗೂ ಉಪನಾಯಕರು, ಮೆಕ್ಕೆ ಜೋಳವನ್ನು ಕ್ವಿಂಟಾಲ್‌ಗೆ 820 ರೂಪಾಯಿ ಬೆಂಬಲ ಬೆಲೆ ಕೊಟ್ಟು ಖರೀದಿ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಇಂದು ರೈತರು ಶಿವಮೊಗ್ಗ, ಕೊಪ್ಪಳ, ದಾವಣಗೆರೆ ಜಿಲ್ಲೆಗಳಲ್ಲಿ ಅನೇಕ ಕಡೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮೆಕ್ಕೆ ಜೋಳವನ್ನು ಬೆಳೆದಿದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ಮೆಕ್ಕೆಜೋಳವನ್ನು ಖರೀದಿ ಮಾಡಿದ್ದೇವೆ. ಅದರ ವಿವರನ್ನು ಕೊಡುತ್ತೇನೆ. ಅವರು ಮೆಕ್ಕೆ ಜೋಳವನ್ನು ಕೊಟ್ಟು ಬಹಳ ದಿವಸದಿಂದ ಅವರಿಗೆ payment ಆಗಿಲ್ಲ ಇದು ಸತ್ಯವಾದಂಥದ್ದು. ಆದುದರಿಂದ, ತಕ್ಷಣ ಇನ್ನೂ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೇನೆ. ಆನಂತರ ಇನ್ನು ಹೆಚ್ಚಿನ ಹಣ ಬಿಡುಗಡೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿ, ರೈತರಿಗಾಗಿರುವ ತೊಂದರೆಯನ್ನು ಸರಿಪಡಿಸಲು ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಶಿವಮೊಗ್ಗದಲ್ಲಿ ಇನ್ನೂ market operation ಇನ್ನೂ ಶುರು ಆಗಿಲ್ಲ. ಶಿವಮೊಗ್ಗದಲ್ಲಿ ಮಾಡದೇ ಇರುವುದರಿಂದ ಶಿಕಾರಿಪುರದಲ್ಲಿ pressure ಆಗಿದೆ. ಮೊದಲು ಶಿವಮೊಗ್ಗದಲ್ಲಿ ಪ್ರಾರಂಭ ಮಾಡಿ.